೩. ರಾಜ್ಯದ ಪೌರ ಸೇವಾ ನೌಕರರ ಬೇಡಿಕೆಗಳು

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಪೌರ ಸೇವಾ ನೌಕರರ ಸಂಘದವರು ಪೌರ ಸೇವಾ ನೌಕರರಿಗೆ ಸಂಬಂಧಿಸಿದಂತೆ ಈ ಹಿಂದೆ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿದ್ದು ಈ ಬಗ್ಗೆ ೬-೩-೮೬ರಂದು ರಾಜ್ಯಾದ್ಯಂತ ಮುಷ್ಕರವನ್ನು ಪ್ರಾರಂಭಿಸಿ ಆನಂತರ ಪೌರಾಡಳಿತ ಸಚಿವರ ಸಮಕ್ಷಮದಲ್ಲಿ ಆದ ಸಂಧಾನದಂತೆ ಮುಷ್ಕರವನ್ನು ಹಿಂತೆಗೆದು ಕೊಂಡಿದ್ದು ಆಲಾಗಾಯ್ತು ಅವರ ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದೆ. ಅವರ ಹಲವಾರು ಬೇಡಿಕೆಗಳನ್ನು ಅದರಲ್ಲೂ ಮುಖ್ಯವಾಗಿ ಪೌರ ಸೇವಾ ನೌಕರರಿಗೆ ಕೆ.ಸಿ.ಎಸ್.ಆರ್. ಅನ್ನು ಅನ್ವಯ ಮಾಡಬೇಕೆಂಬ ಅವರ ಪ್ರಾಮುಖ್ಯ ಬೇಡಿಕೆಯನ್ನು ಶೀಘ್ರವಾಗಿ ಈಡೇರಿಸುವುದಾಗಿ ಸರ್ಕಾರ ಈ ಹಿಂದೆ ಭರವಸೆ ನೀಡಿದ್ದು ಈವರೆಗೂ ಕಾರ್ಯಗತ ಆಗಿರುವುದಿಲ್ಲ. ಮತ್ತೆ ಮತ್ತೆ ಈ ಬೇಡಿಕೆಗಳ ಬಗ್ಗೆ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದವರು ಸರ್ಕಾರದವರನ್ನು ಒತ್ತಾಯಿಸುತ್ತಿದ್ದು ಈವರೆಗೂ ಬೇಡಿಕೆಗಳನ್ನು ಈಡೇರಿಸುವುದರಿಂದ ತುಂಬಾ ಹತಾಶರಾಗಿ ದಿನಾಂಕ ೫-೨-೯೯೭ರಿಂದ ಪುನಃ ಮುಷ್ಕರದಲ್ಲಿ ಹೋಗುವ ನಿರ್ಧಾರವನ್ನು ಮಾಡಿ ಸರ್ಕಾರಕ್ಕೆ ಈ ಬಗ್ಗೆ ತಿಳಿವಳಿಕೆ ನೀಡಿರುತ್ತಾರೆ. ಸರ್ಕಾರ ಪೌರ ಸೇವಾ ನೌಕರರ ಬಹುಪಾಲು ಬೇಡಿಕೆಗಳನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದು ಈ ಬಗ್ಗೆ ಹೊರಡಿಸಬೇಕಾದ ಆಜ್ಞೆಗಳು ವಿಳಂಬವಾಗಿರುವುದು ತುಂಬಾ ವಿಷಾದಕರ. ದಿನಾಂಕ ೫-೨-೯೭ರಿಂದ ಪೌರ ಸೇವಾ ನೌಕರರು ರಾಜ್ಯಾದ್ಯಂತ ಮುಷ್ಕರದಲ್ಲಿ ತೊಡಗಿದಲ್ಲಿ ಆದರಿಂದಾಗಿ ಪಟ್ಟಣ ಹಾಗೂ ನಗರ ಪ್ರದೇಶಗಳ ನೈರ್ಮಲ್ಯಕ್ಕೆ ಹಾಗೂ ಆರೋಗ್ಯಕ್ಕೆ ತೀವ್ರ ಧಕ್ಕೆ ಒದಗುವ ಸಂಭವವಿರುವುದರಿಂದ ಸರ್ಕಾರ ಪೌರ ಸೇವಾ ನೌಕರರ ಬೇಡಿಕೆಗಳನ್ನು ಈಡೇರಿಸಿ ಈ ಬಗ್ಗೆ ಅಗತ್ಯ ಆಜ್ಞೆಗಳನ್ನು ತಕ್ಷಣ ಹೊರಡಿಸಿ ಉದ್ದೇಶಿತ ಮುಷ್ಕರವನ್ನು ಅವರು ಕೈಬಿಡುವಂತೆ ಮನವೊಲಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಆಹಾರ ಮತ್ತು ಅರಣ್ಯ ಹಾಗೂ ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಅವರು ಮುಷ್ಕರ ಹೂಡಬೇಕಾಗಿಲ್ಲ. ಸನ್ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದೇ ಪ್ರಕಾರ ಸರ್ಕಾರಿ ಆಜ್ಞೆಯನ್ನು ಬೇಗ ಹೊರಡಿಸುತ್ತೇವೆ. ನಿನ್ನೆ ವಿಚಾರ ಮಾಡಿದ್ದೇವೆ. ಬೇಗ ಹೊರಡಿಸುತ್ತೇವೆ.

೪. ಮಂಗಳೂರಿನ ಹೊಯ್ಗೆ ಬಜಾರಿನಲ್ಲಿ ಶೋಲ್ ಯಾರ್ಡ್‌ನಲ್ಲಿ ಉಂಟಾದ ಬೆಂಕಿ ಅಪಘಾತದ ಬಗ್ಗೆ

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಹೊಯ್ಗೆ ಬಜಾರಿನಲ್ಲಿ ಕೆಲವು ದಿವಸಗಳ ಹಿಂದೆ ಅಲ್ಲಿನ ಶೋಲ್ ಯಾರ್ಡಿಗೆ ಬೆಂಕಿ ಬಿದ್ದು ಸುಮಾರು ಒಂದು ಕೋಟಿಗೂ ಮಿಕ್ಕಿ ನಷ್ಟವಾಗಿದೆಯೆಂದು ತಿಳಿದಿದೆ. ಮೀನುಗಾರರ ದೋಣಿಗಳು, ಬಲೆಗಳು ಇನ್ನಿತರ ಸಾಮಗ್ರಿ ಭಸ್ಮವಾಗಿದೆ. ಇದರಿಂದಾಗಿ ಬಡ ಮೀನುಗಾರರು, ಕೆಲಸಗಾರರು ಅನಾಥರಾಗಿರುತ್ತಾರೆ. ಈ ಬಗ್ಗೆ ಬೆಂಕಿಯಲ್ಲಿ ನಷ್ಟಕ್ಕೊಳಗಾದವರಿಗೆ ಸರಕಾರ ಪರಿಹಾರ ಕೊಡುವುದೇ? ಸಂತ್ರಸ್ತರಿಗೆ ಯಾವ ರೀತಿಯ ನೆರವು ನೀಡುವ ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ. ಈ ಕುರಿತು ತು ವಿವರಗಳನ್ನು ಅರಿಯಬೇಕಾಗಿದೆ. ಈ ಕುರಿತು ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮೀನುಗಾರಿಕಾ ಸಚಿವರ ಪರವಾಗಿ ಈ ಉತ್ತರವನ್ನು ಕೊಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಇದಿನಬ್ಬರವರ ೩೩ನೇ ನಿಯಮದ ಮೇರೆಗೆ ಸೂಚನಾ ಪತ್ರದ ಸಂಖ್ಯೆ ೪ರಲ್ಲಿ ಗಮನ ಸೆಳೆದ ವಿಚಾರವಾಗಿ ಕರ್ನಾಟಕ ರಾಜ್ಯ ಸನ್ಮಾನ್ಯ ಸಚಿವರಾದ ಶ್ರೀ ಕೆ.ಎಂ. ಕೃಷ್ಣಾರೆಡ್ಡಿಯವರು ನೀಡಿರುವ ಹೇಳಿಕೆ.

ದಿನಾಂಕ ೧೩-೧-೯೯೭ರಂದು ಮುಂಜಾನೆ ಮಂಗಳೂರು ಹೊಯ್ಗೆ ಬಜಾರ್‌ನಲ್ಲಿರುವ ಮಹಾ ಮೈಸೂರು ಬೋಟ್ ಬಿಲ್ಡಿಂಗ್ ಎಂಟರ್‌ಪ್ರೈಸಸ್ ಹಾಗೂ ಸದ್ರಿ ಸಂಸ್ಥೆಯ ಸಹಭಾಗಿತ್ವದ ಸಂಸ್ಥೆ ವಿಶ್ವ ಕಿರಣ್ ಕಾರ್ಪೊರೇಷನ್ ಎಂಬ ಸಂಸ್ಥೆಗಳಿಗೆ ಸಂಬಂಧಿಸಿದ ದೋಣಿ ನಿರ್ಮಾಣ ಅಂಗಣಗಳಿಗೆ ಉಂಟಾದ ಭೀಕರ ಬೆಂಕಿ ಅನಾಹುತದಿಂದ ದೋಣಿ ನಿರ್ಮಾಣ ಅಂಗಣಗಳ, ಕೆಲವೊಂದು ಭಾಗಗಳೂ

ಸೇರಿದಂತೆ ದಡದಲ್ಲಿ ಎಳೆದಿಟ್ಟ ಕೆಲವು ಯಾಂತ್ರಿಕ ದೋಣಿಗಳು ಹಾಗೂ ಇತರ ಸೊತ್ತುಗಳು ನಾಶ ಹೊಂದಿರುತ್ತವೆ. ಬೆಂಕಿ ಅನಾಹುತದಲ್ಲಿ ನಷ್ಟ ಹೊಂದಿದ ವಿವರಗಳು ಈ ಕೆಳಗಿನಂತಿವೆ:

೧. ಮಹಾಮ್ಮೈಸೂರು ಬೋಟ್ ಬಿಲ್ಡಿಂಗ್ ಎಂಟರ್‌ಪ್ರೈಸಸ್ ಹಾಗೂ ವಿಶ್ವ ಕಿರಣ್ ಕಾರ್ಪೋರೇಷನ್ ಈ ಸಂಸ್ಥೆಗಳ ದೋಣಿ ನಿರ್ಮಾಣ ಅಂಗಣದ ಕಛೇರಿ ಕೊಠಡಿ, ಸ್ಟೋರ್ ರೂಮ್, ಇಂಜಿನ್ ರೂಮ್, ದೋಣಿ ನಿರ್ಮಾಣ ಶೆಡ್‌ಗಳು, ಫೈಬರ್‌ಗ್ಲಾಸ್ ದೋಣಿಗಳ ಅಚ್ಚು (ಮೌಲ್ಡ್) ಹಾಗೂ ಫೈಬರ್‌ಗ್ಲಾಸ್ ದೋಣಿಗಳು ಮತ್ತು ದೋಣಿ ನಿರ್ಮಾಣಕ್ಕೆ ಬೇಕಾದ ಹಲವಾರು ಸಾಮಗ್ರಿಗಳು ನಾಶವಾಗಿರುತ್ತವೆ. ಅಲ್ಲದೆ, ನಿರ್ಮಾಣ ಹಂತದಲ್ಲಿದ್ದ ಒಂದು ೫೨ ಅಡಿ ಉದ್ದದ ಮೀನುಗಾರಿಕೆ ದೋಣಿಯು ಸಂಪೂರ್ಣ ನಾಶವಾಗಿರುತ್ತದೆ. ನಾಶವಾದ ಸೊತ್ತುಗಳ ಪರ್ಯಾಲ್ಯ ಸುಮಾರು ರೂ. ೩೫ ಲಕ್ಷ ಎಂದು ಅಂದಾಜಿಸಲಾಗಿದೆ. ಈ ಮೂರು ಸಂಸ್ಥೆಗಳು ರೂ. ೧೯.೦೦ ಲಕ್ಷಕ್ಕೆ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಗಳೊಂದಿಗೆ ವಿಮೆ ಮಾಡಿರುವುದಾಗಿಯೂ ತಿಳಿಸಿದ್ದು, ವಿಮೆ ಕಂಪನಿಯವರು ನಷ್ಟದ ಬಗ್ಗೆ ಸಮೀಕ್ಷೆ ನಡೆಸಿ ಪರ್ಯಾಲ್ಯದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದು ವಿಮೆ ಮೊತ್ತವನ್ನು ಪಾವತಿ ಮಾಡಲು ಕ್ರಮ ಕೈಗೊಳ್ಳುತ್ತಿದ್ದಾರೆ.

೨. ದಡದಲ್ಲಿ ಎಳೆದಿಟ್ಟ ೫ ಯಾಂತ್ರಿಕ ದೋಣಿಗಳು ನಾಶವಾಗಿದ್ದು ಅವುಗಳ ವಿವರ ಈ ಕೆಳಗಿನಂತಿವೆ :

ಅ) ಮೆ॥ ಉಮಾ ಎಂಟರ್‌ಪ್ರೈಸಸ್, ಮಂಗಳೂರು ಇವರ ಅನಂತೇಶ್ವರ ಎಂಬ ಹೆಸರಿನ ೩೨ ಅಡಿ ಉದ್ದದ ಟ್ರಾಲ್ ದೋಣಿ ಸಂಪೂರ್ಣ ನಾಶವಾಗಿರುತ್ತದೆ. ಸದ್ರಿ ದೋಣಿಯನ್ನು ಓರಿಯೆಂಟಲ್ ಇನ್ಶೂರೆನ್ಸ್ ಕಂಪನಿ, ಮಂಗಳೂರು ಇವರಲ್ಲಿ ರೂ. ೧.೬೦ ಲಕ್ಷಕ್ಕೆ ವಿಮೆ ಮಾಡಿಸಲಾಗಿದ್ದು, ನಷ್ಟದ ಬಗ್ಗೆ ವಿಮೆಯ ಮೊತ್ತವನ್ನು ಪಾವತಿ ಮಾಡಲು ವಿಮಾ ಕಂಪನಿಯವರು ಕ್ರಮ ಕೈಗೊಳ್ಳುತ್ತಿದ್ದಾರೆ.

ಆ) ಶ್ರೀ ಶೀನಪ್ಪ ಡಿ. ಕೋಟ್ಯಾನ್ ಮತ್ತು ಪಾರ್ಟಿ ಹೆಜಮಾಡಿ ಇವರಿಗೆ ಸೇರಿದ ೩೦ ಅಡಿ ಉದ್ದದ ಎಸ್.ಬಿ.ಎಂ.ಎಸ್. ನಂಬ್ರದ ೧೦ ಯಾಂತ್ರಿಕ ಟ್ರಾಲ್ ದೋಣಿಯು ಸಂಪೂರ್ಣ ನಾಶಹೊಂದಿರುತ್ತದೆ. ಸದ್ರಿ ದೋಣಿಯನ್ನು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ, ಮಂಗಳೂರು ಇವರಲ್ಲಿ ೦.೫೦ ಲಕ್ಷಕ್ಕೆ ವಿಮೆ ಮಾಡಲಾಗಿದ್ದು, ವಿಮೆ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿ ಮಾಡಲಾಗಿದೆಯೆಂದು ತಿಳಿದು ಬಂದಿದೆ.

ಇ) ಶ್ರೀಮತಿ ಶಂಕರಿನಾಯ್ಕ್, ಹೊಯ್ಗೆಬಜಾರ್, ಮಂಗಳೂರು ಇವರಿಗೆ ಸೇರಿದ ಕೃಷ್ಣಮ್ಮ ಎಂಬ ಹೆಸರಿನ ೩೨ ಅಡಿ ಉದ್ದದ ಯಾಂತ್ರಿಕ ದೋಣಿ ಸಂಪೂರ್ಣ ನಾಶಹೊಂದಿರುತ್ತದೆ. ಈ ದೋಣಿಯು ಪಾಲೀಕ ಶ್ರೀ ಮೊಹನ್‌ದಾಸ್ ಸಾಲ್ಯಾನ್ ಇವರದಾಗಿದ್ದು ಇದನ್ನು ಸಿಂಡಿಕೇಟ್ ಬ್ಯಾಂಕ್‌ನವರು ಹರಾಜು ಮಾಡಿದಾಗ ರೂ. ೧೨,೬೫೦-೦೦ಕ್ಕೆ ಶ್ರೀಮತಿ ಶಂಕರಿ ನಾಯ್ಕ್ ಇವರು ಖರೀದಿಸಿ ದುರಸ್ತಿಪಡಿಸಿರುವುದಾಗಿ ತಿಳಿದು ಬಂದಿದೆ. ಈ ದೋಣಿಗೆ ವಿಮೆ ಮಾಡಲಿಲ್ಲ.

ಈ) ಶ್ರೀ ಬಿ. ವೆಂಕಟೇಶ ಬೋಳಾರ, ಮಂಗಳೂರು ಇವರಿಗೆ ಸೇರಿದ ೩೨ ಅಡಿ ಉದ್ದದ ''ಪ್ರಿಯದರ್ಶಿನಿ'' ಎಂಬ ಟ್ರಾಲ್ ದೋಣಿಯು ಸಂಪೂರ್ಣ ನಾಶಹೊಂದಿರುತ್ತದೆ. ಸದ್ರಿಯವರು ಸಾಲ ಮರುಪಾವತಿ ಮಾಡದೇ ಇರುವುದರಿಂದ ಈ ದೋಣಿಯನ್ನು ಕೆನರಾ ಬ್ಯಾಂಕ್, ವೆಲ್‌ನಶಿಯಾ, ಮಂಗಳೂರು ಇವರು ಮುಟ್ಟುಗೋಲು ಹಾಕಿದ್ದು ವಿಲೇ ಮಾಡಲು ದಡದಲ್ಲಿಟ್ಟುದಾಗಿದೆ. ಸದ್ರಿ ದೋಣಿಯನ್ನು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯಲ್ಲಿ ರೂ. ೯೬,೪೦೦-೦೦ ವಿಮೆ ಮಾಡಿದ್ದು ವಿಮೆ ಮೊತ್ತ ಪಾವತಿ ಮಾಡಿರುತ್ತಾರೆಂದು ತಿಳಿದು ಬಂದಿದೆ.

ಉ) ಶ್ರೀ ಮಾಧವ ಪುತ್ರನ್ ಮತ್ತು ಪಾರ್ಟಿ, ಸುರತ್ಕಲ್ ಇವರಿಗೆ ಸೇರಿದ ೩೬ ಅಡಿ ಉದ್ದದ ಜಾನಕಿರಾಮ್ ಎಂಬ ಯಾಂತ್ರಿಕ ದೋಣಿಯು ಸಂಪೂರ್ಣ ನಾಶಹೊಂದಿರುತ್ತದೆ. ಸದ್ರಿ ದೋಣಿಯನ್ನು ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಯಲ್ಲಿ ರೂ. ೧.೦೩ ಲಕ್ಷಕ್ಕೆ ವಿಮೆ ಮಾಡಿದ್ದು, ವಿಮೆ ಮೊತ್ತವನ್ನು ಪಾವತಿ ಮಾಡಲು ಕ್ರಮ ಕೈಗೊಳ್ಳುತ್ತಿದ್ದಾರೆ.

ಊ) ಮಂಗಳೂರು ವೆಲ್‌ಫೇರ್ ಸೊಸೈಟಿ ಮುಖಾಂತರ ವಿತರಿಸಿದ ''ಚಿರಂಜೀವಿ ಸಾಗರ್'' ಎಂಬ ಯಾಂತ್ರಿಕ ದೋಣಿಯ ಇಂಜಿನಿನ ಬಿಡಿ ಭಾಗಗಳನ್ನು ಮಹಾ ಮ್ಮೈಸೂರು ಬೋಟ್

ಬಿಲ್ಡಿಂಗ್ ಯಾರ್ಡಿನಲ್ಲಿ ಇಡಲಾಗಿದ್ದು, ಇವುಗಳು ಬೆಂಕಿ ಅನಾಹುತದಲ್ಲಿ ನಾಶ ಹೊಂದಿರುತ್ತದೆ. ಈ ಬಗ್ಗೆ ರೂ. ೨೦,೦೦೦-೦೦ ವಿಮಾ ಪೊತ್ತ ಪಡೆದಿರುವುದಾಗಿ ತಿಳಿದು ಬಂತಿದೆ.

೩. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳನ್ನು ಏರಿ ಇಳಿಸುವ ಕಂಟ್ರಾಕ್ಟ್ ವೃತ್ತಿಯಲ್ಲಿರುವ ಉಳ್ಳಾಲದ ನಿವಾಸಿ ಶ್ರೀ ಕೆ. ಎಂ. ಮೂಸ ಇವರು ದೋಣಿಗಳನ್ನು ಏರಿ ಇಳಿಸುವ ಕೆಲಸಕ್ಕಾಗಿ ಬೇಕಾದ ಸಾಮಗ್ರಿಗಳನ್ನು ಜೋಪಾನವಾಗಿಡಲು ಕಟ್ಟಿಸಿದ ಶೆಡ್ ಹಾಗೂ ಅದರಲ್ಲಿದ್ದ ಕೆಲವೊಂದು ಸಾಮಗ್ರಿಗಳು ಅನಾಹುತದಲ್ಲಿ ನಾಶಹೊಂದಿರುತ್ತದೆ. ಆಲ್ಲದೆ ಸದ್ರಿಯವರೊಂದಿಗೆ ದುಡಿಯುವ ಸುಮಾರು ೩೦ ಮಂದಿಯ ಬಟ್ಟೆ, ಅಡಿಗೆ ಸಾಮಾನು ಇತ್ಯಾದಿ ಕೂಡ ನಾಶವಾಗಿರುತ್ತದೆಂದು ತಿಳಿದು ಬಂದಿದೆ. ಈ ಬಗ್ಗೆ ನಷ್ಟ ಸುಮಾರು ರೂ. ೨೫,೦೦೦-೦೦ ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ವಿಮೆ ಮಾಡಲಿಲ್ಲ. ಇವರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಒಂದು ಮನವಿಯನ್ನು ಆರ್ಪಿಸಿರುವರು. ಈ ವಿಚಾರದಲ್ಲಿ ಜಿಲ್ಲಾಧಿಕಾರಿಯವರಿಂದ ಸೂಕ್ತ ವರದಿಯನ್ನು ತರಿಸಿ ತಕ್ಕ ಪರಿಹಾರವನ್ನು ಒದಗಿಸಲು ಪ್ರಯತ್ನಿಸುವೆನು.

೪. ಶ್ರೀ ಶಂಕರ ನಾಯ್ಕ, ಬೋಟ್ ಬಿಲ್ಡಿಂಗ್, ಹೊಯ್ಗೆ ಬಜಾರ್. ಮಂಗಳೂರು ಇವರಿಗೆ ಸೇರಿದ ಕೆಲಸದಾಳುಗಳು ತಂಗುವ ಶೆಡ್ ಮತ್ತು ದೋಣಿ ನಿರ್ಮಾಣಕ್ಕೆ ಬೇಕಾದ ಮರಗಳು ನಾಶವಾಗಿರುತ್ತದೆ. ಸುಮಾರು ರೂ. ೧.೨೫ ಲಕ್ಷ ನಷ್ಟ ಎಂದು ಅಂದಾಜು ಮಾಡಲಾಗಿದೆ ಈ ಶೆಡ್ ಸೇರಿದಂತೆ ಬೇಟ್ ಬಿಲ್ಡಿಂಗ್ ಯಾರ್ಡನ್ನು ವಿಮೆಮಾಡಲಾಗಿದ್ದು ವಿಮೆ ಹಣವನ್ನು ಪಾವತಿ ಮಾಡಲು ವಿಮಾ ಕಂಪನಿಯವರು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ತಿಳಿದು ಬಂದಿದೆ.

೫. ಈ ಅನಾಹುತಗಳಿಗೆ ಮೂಲ ಕಾರಣವು ಇನ್ನೂ ತಿಳಿದು ಬಂದಿಲ್ಲ. ಅಲ್ಲದೆ ಸರ್ಕಾರಕ್ಕೆ ಮೇಲಿನ ಸಂಸ್ಥೆಗಳವರಾಗಲೀ, ದೋಣಿಗಳನ್ನು ಕಳೆದುಕೊಂಡ ಮೀನುಗಾರರಾಗಲೀ ಯಾವ ಒಂದು ಮನವಿಯನ್ನೂ ಕೂಡ ಈತನಕ ಸಲ್ಲಿಸಿಲ್ಲ. ಆದಾಗ್ಯೂ ಸವಿವರವಾದ ವಿವರ ಬಂದೊಡನೆ ಮೀನು ಗಾರರಿಗೆ ಪರಿಹಾರ ಒದಗಿಸಲು ಸರಕಾರವು ಬದ್ಧವಾಗಿದೆಯೆಂದು ತಿಳಿಸಬಯಸುವೆನು.

೫. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೃದ್ಧಾಪ್ಯ ವೇತನ ವಿಧವಾ ವೇತನ ಮತ್ತು ಅಂಗವಿಕಲರಿಗೆ ವಿಶ್ರಾಂತಿ ವೇತನ ಕೊಡುವುದರಲ್ಲಿ ವಿಳಂಬ

ಶ್ರೀ ಬ್ಲೇಸಿಯಸ್ ಎಂ. ಡಿಸೌಜ.—ಸನ್ಮಾನ್ಯ ಅಧ್ಯಕ್ಷರೆ, ಕಳೆದ ಮೂರು ತಿಂಗಳಿನಿಂದ ರಾಜ್ಯ ದಲ್ಲಿ ಆದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವಿಶ್ರಾಂತಿ ವೇತನ, ಅಂಗವಿಕಲರ ವಿಶ್ರಾಂತಿ ವೇತನವನ್ನು ನೀಡದಿರುವುದರಿಂದ ಸದರಿ ಬಡಜನರು ಜೀವನ ನಿರ್ವಹಣೆ ನಡೆಸುವಲ್ಲಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ವಿಶ್ರಾಂತಿ ವೇತನ ನೀಡಲಾಗದಷ್ಟು ಸರ್ಕಾರದ ಬೊಕ್ಕಸ ಬರಿದಾಗಿದೆಯೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಿಂದ ವಿಷಯ ತಿಳಿಯಬಯಸುತ್ತೇನೆ. ಮತ್ತು ಕೂಡಲೇ ವಿಶ್ರಾಂತಿ ವೇತನ ನೀಡುವಂತೆ ಸಂಬಂಧ ಪಟ್ಟವರಿಗೆ ಆದೇಶ ನೀಡುವಂತೆಯೂ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ ಕಂಪ್ಯೂಟರ್‌ನಲ್ಲಿ ಉಂಟಾದ ದೋಷದಿಂದಾಗಿ ಮನಿಯಾರ್ಡರುಗಳನ್ನು ಮುದ್ರಿಸಿ ವಿಜಾನೆಗಳಿಗೆ ಸಕಾಲದಲ್ಲಿ ಕಳುಹಿಸಲಾಗದಿದ್ದುದರಿಂದ ಹಾಗೂ ಮನಿಯಾರ್ಡರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಆಂಚೆ ಕಛೇರಿಗಳು ಬಟವಾಡೆ ಮಾಡಲು ಹೆಚ್ಚಿಗೆ ಕಾಲಾವಕಾಶ ತಗಲಿದ್ದುದರಿಂದ ಕೆಲವೊಂದು ಪಿಂಚಣಿದಾರರಿಗೆ ಸಕಾಲದಲ್ಲಿ ಮನಿಯಾರ್ಡರುಗಳು ತಲುಪಿಲ್ಲ. ಮಿತವ್ಯಯ ಆದೇಶವು ಪಿಂಚಣಿ ಬಟವಾಡೆಗೆ ಅನ್ವಯಿಸುವುದಿಲ್ಲ.

ಕ್ಲಿಪ್ತ ಕಾಲದಲ್ಲಿ ಸಂದಾಯವಾಗುವಂತೆ. ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕುಗಳ ಮುಖಾಂತರ ಸಂದಾಯ ಮಾಡುವ ವ್ಯವಸ್ಥೆಯನ್ನೂ ಸಹ ಜಾರಿಗೆ ತರಲಾಗಿದೆ,

೬. ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಚುನಾವಣೆಯಲ್ಲಿ ನಡೆದ ದುರ್ವ್ಯವಹಾರ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಕಳೆದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆ ಸಂದರ್ಭದಲ್ಲಿ ಬಡ ಜನರ ಹುಡ್ಕೋ ಮನೆ ಕಾಲನಿ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಬಡ ಅವಿದ್ಯಾವಂತ ಕಾಲನಿಗಳಲ್ಲಿ ಅಡಳಿತ ಪಕ್ಷವಾದ ಜನತಾ ಪಕ್ಷವು ಮತದಾರರಿಗೆ ತಲಾ